*ಕೆ.ಮೈಥಿಲಿಕೃಷ್ಣ, ಬೆಂಗಳೂರು*
*ಗೌಡರು ವಿವೇಕಾನಂದರಂತೆ ಕಾಣಿಸುತ್ತಾರೆ ಎಂದು ಅವರು ಉನ್ನತ ಸ್ಥಾನದಲ್ಲಿದ್ದಾಗ ಯಾರೋ ಹೇಳಿದ್ದರಂತೆ. ಈಗ?*



ವಿವೇಕವೂ ಇಲ್ಲ, ಆನಂದವೂ ಇಲ್ಲ ಎಂದರಂತೆ ಅದೇ ವ್ಯಕ್ತಿ.

*ಭಾರತಿ ಮಾನಗೆ, ಹೊನ್ನಾವರ*
*ಹಳೇ ರೋಗಿ ಮೇಲೋ, ಹೊಸ ವೈದ್ಯ ಮೇಲೋ...?*
ಇಬ್ಬರು ಮೇಲೇ... ಹಳೇ ರೋಗಿ ಮಂಚದ ಮೇಲೆ, ಹೊಸ ವೈದ್ಯ ಕುರ್ಚಿಯ ಮೇಲೆ!

*ಆಸಿಫ್ ಎ.ಎಸ್. ಆರ್ಡಿಕೊಪ್ಪ*
*ಸಾವಿರ ಸುಳ್ಳು ಹೇಳಿ ಮದುವೆ ಮಾಡಬಹುದು, ಎಷ್ಟು ಸುಳ್ಳು ಹೇಳಿ ಪಕ್ಷ ಕಟ್ಟಬಹುದು?*
ಸತ್ಯವನ್ನೇ ಹೇಳುತ್ತೇನೆ ಎಂಬ ಒಂದು ಪ್ರಮುಖ ಸುಳ್ಳನ್ನು ಹೇಳಿದರೆ ಸಾಕೇ ಸಾಕು.

*ಶಿರಾಲಿ ದೀಪಕ್ ಆರ್ ಶೇಟ್, ಬೆಂಗಳೂರು*
*ಮುಂದೆ ನಾಯಿಗಳಿಗೂ ಮಾತು ಬಂದು, ದೇಶ ಆಳುವ ಮಟ್ಟಕ್ಕೆ ಬಂದರೆ ದೇಶದ ಗತಿ ಏನಾಗಬಹುದು?*



ನಾಯಿಪಾಡು.

*ಕೌಶಿಕ್ ರಾಜ್, ಹನುಮನಾಳು*
*ದಿನಕ್ಕೊಬ್ಬ ನಟರು ಸಾಯುತ್ತಿದ್ದಾರಲ್ಲಾ; ಶಿಷ್ಯ ಮೊದಲು, ಗುರು ನಂತರ. ಹೀಗೆ ಆದರೆ ಹೇಗೆ?*
ಸಾವಿಗೂ ಸ್ಟೇ ಆರ್ಡರ್ ತರಲಾಗದಲ್ಲ... ಕಲೆ ಇರುವವರೆಗೆ ಕಲಾವಿದ, ದೇಹವಳಿದರೂ, ಜೀವಂತ ಎಂಬುದೊಂದೇ ಸಮಾಧಾನ.

*ಹಳಿಯೂರು ಪಂಚಾಕ್ಷರಿ, ದಾವಣಗೆರೆ*
*ಹೆಂಡತಿಯನ್ನು ತೃಪ್ತಿ ಪಡಿಸಲು ಏನು ಮಾಡಬೇಕು?*
ಥೈಲಿ ಬಿಚ್ಚಿ, ಬಾಯಿ ಮುಚ್ಚಿ, ಅವಳಿಂಗಿತದಂತೆ ಗೋಣು ಆಡಿಸಿದರಾಯ್ತು.

*ಡಿ.ಆರ್.ಮಂಜುನಾಥ್, ದೇಬೂರು*
*ಮನುಷ್ಯ ಬದುಕಬೇಕಾದರೆ ಗಾಳಿ, ನೀರು, ಆಹಾರ ಬೇಕು. ಸುಖವಾಗಿರಬೇಕಾದರೆ?*
ಅವು ಮೂರೂ ಹೆಚ್ಚು-ಕಡಿಮೆ ಆಗದಂತಿರಬೇಕು.

*ಜಿ.ಎಮ್.ಮಾನಸ, ಗಟ್ಟವಾಡಿ*
*ಕನ್ನಡದ ಎಲ್ಲಾ ಚಾನಲ್‌ಗಳಲ್ಲಿ ನಿರೂಪಕರು, ಸ್ಪರ್ಧಿಗಳು ಹರಕು ಮುರುಕು ಇಂಗ್ಲಿಷನ್ನೇ ಬಳಸಲು ಕಾರಣವೇನು?*
ಕೊಲ್ಲಬೇಕಾದರೆ ಬೇರೆ ಭಾಷೆಯನ್ನೇ ಕೊಲ್ಲೋಣ, ಕನ್ನಡ ಬಳಸದಿರುವುದರ ಮೂಲಕ ಕಾಪಾಡೋಣ ಎಂಬ ಕನ್ನಡಾಭಿಮಾನ ಅವರದು.

*ನೆ.ಸು.ಆತ್ಮಾನಂದ, ಬೆಂಗಳೂರು*
*ವರದಕ್ಷಿಣೆ ಬೇಡ - ನನ್ನನ್ನು ಅಳಿಯನನ್ನಾಗಿ ಸ್ವೀಕರಿಸುವಿರಾ ಭಾವಿ ಮಾವಯ್ಯಾ?*
ವರದಕ್ಷಿಣೆ ಬೇಡವೇ.........? ಹಾಗಿದ್ದರೆ.... ಏನು ಐಬು?

*ವೈ.ಎಚ್.ಎಸ್, ದಾವಣಗೆರೆ.*
*ಮಹಾಪ್ರಳಯದ ವದಂತಿ ನಿಜವೋ, ಸುಳ್ಳೋ ಸಾರ್?*
ವದಂತಿ ಹಬ್ಬುವವರಿಗೆ ನಿಮ್ಮ ಹೆಸರಿಗೆ ವಿಲ್ ಬರೆಯಹೇಳಿ, ನಿಜ ಹೊರಬರುತ್ತದೆ.

*ಸಾವಿತ್ರಮ್ಮ ಕೆ. ವಿಭೂತಿ, ಹರಿಹರ*
*ಮುಂದಿನ ದಿನಗಳಲ್ಲಿ ಪ್ರಾಮಾಣಿಕತೆ ಎಂಬುದು ಕಥೆಯಾಗಬಹುದೇನೋ ಅಲ್ಲವೇ?*
ಅಷ್ಟೇ ಅಲ್ಲ, ಇದು ಕಥೆಯಲ್ಲ, ಪ್ರಾಮಾಣಿಕತೆ ಎಂಬ ಸೀರಿಯಲ್ಲೂ ಬರುತ್ತದಂತೆ.

*ರವಿಚಂದ್ರ ವಿ ಕೆಂಗಾರಿ, ಕೊಪ್ಪಳ*
*ಹಿಂದಿನ ರಾಜಕಾರಣಿಗಳು ಜನಸೇವೆಯೇ ಜನಾರ್ಧನ ಸೇವೆಯೆಂದು ಭಾವಿಸಿದ್ದರು. ಈಗಿನವರು?*
ಜನರ ಧನ ಇರುವುದೇ ತಮ್ಮ ಸೇವನೆಗಾಗಿ ಎಂದು!

*ಪಿ.ಎನ್. ಶ್ರೀವತ್ಸ, ಬೆಂಗಳೂರು*
*ಕಳೆದುಹೋದ ನಾಯಿ ಹುಡುಕಿಕೊಟ್ಟವರಿಗೆ ರೂ. 15,000?- ಬಹುಮಾನವಂತೆ...?*
ಇದೇ ವಿಪರ್ಯಾಸ, ನಾಯಿಯನ್ನು ಅರಸುತ್ತಾರೆ, ತಾಯಿಯನ್ನು ಅಳಿಸುತ್ತಾರೆ.

## ಬಹುಮಾನಿತ ಪ್ರಶ್ನೆ

*ಜೆ.ಪ್ರದೀಪ ಕುಮಾರ, ಹೂವಿನಹಡಗಲಿ*
*ಹೃದಯದ ಮಾತಿಗೂ, ಮನಸ್ಸಿನ ಮಾತಿಗೂ ಏನು ವ್ಯತ್ಯಾಸ?*
ಹೃದಯದ ಮಾತನ್ನು ಕಾರ್ಡಿಯಾಲಜಿಸ್ಟ್ ಆಡುತ್ತಾನೆ, ಮನಸ್ಸಿನ ಮಾತನ್ನು ಸೈಕಾಲಜಿಸ್ಟ್ ಆಡುತ್ತಾನೆ.

*ಖಲಂದರ್ ಅಝೀಮ್ ಜಾವಗಲ್, ಮಂಗಳೂರು*
*ಪುಸ್ತಕವನ್ನು ಹಿಡಿಯಬೇಕಾದ ಕೈಗಳು ಬ್ರಾಂದಿ, ಸಿಗರೇಟ್, ಗುಟ್ಕಾ ಹಿಡಿಯುತ್ತಿವೆಯಲ್ಲಾ...?*
ಮೂರೂ ಹಿಡಿದವರು ಮೂರೂ ಬಿಟ್ಟವರಾಗಿ ದೇಶವಾಳಬಹುದೆಂಬ ಹುಂಬ ಹಂಬಲವಂತೆ.

*ಜಿ.ಸುಬ್ಬನಾಯಕ, ಬೊಮ್ಮಲಾಪುರ*
*ಹೆಸರಿನಿಂದ ಹಣ ಮಾಡಬಹುದೋ, ಹಣದಿಂದ ಹೆಸರೋ?*
ಯುಕ್ತಿಯಿದ್ದರೆ ಹೆಸರಿನಿಂದ ಹಣ, ಕುಯುಕ್ತಿಯಿದ್ದರೆ ಹಣದಿಂದ ಹೆಸರು!

*ಕೆ.ಮಲ್ಲೇಶ, ಕೊಡಸೋಗೆ*
*ಅಕಸ್ಮಾತ್ ನಿಮ್ಮ ಬಳಿ ದೇವರು ಪ್ರತ್ಯಕ್ಷನಾಗಿ ನಿನಗೇನು ವರ ಬೇಕು ಕೇಳು ಭಕ್ತ ಎಂದಾಗ ನಿಮ್ಮ ಉತ್ತರ?*
ಟಿ.ವಿ.ಯಲ್ಲಿ ಬರುವ ಭವಿಷ್ಯ, ಪುನರ್ಜನ್ಮ ಸೀರಿಯಲ್ ಕಾರ್ಯಕ್ರಮಗಳಿಂದ ಜನತೆಗೆ ಮುಕ್ತಿ ದೊರಕಿಸು ತಂದೆ ಎಂದು.

*ಕೆ.ಜಿ.ಶೇಖರಪ್ಪ, ಸಿರಿಗೆರೆ.*
*ದಾರಿ ತೋರುವ ಫಲಕಗಳಲ್ಲಿ ಭಿತ್ತಿಪತ್ರಗಳನ್ನು ಅಂಟಿಸುವವರಿಗೆ ಏನೆನ್ನುತ್ತೀರಾ ಸಾರ್?*
ಫಲಕದ ಫಲಿತ ಹಾಳುಗೆಡಿಸುವ ದುರ್ಮಾರ್ಗಿ!

*ನೆ.ಸು. ಆನಂದ, ಬೆಂಗಳೂರು*
*ಇಲ್ಲೊಬ್ಬ ತನ್ನ ಎಲೆಯಲ್ಲಿ ಹೆಗ್ಗಣ ಬಿದ್ದಿದ್ದರೂ ಬೇರೆಯವರ ಎಲೆಯಲ್ಲಿ ತಪ್ಪನ್ನು ಹುಡುಕುವನಲ್ಲಾ...?*



ಹಿಂದಿನ ಜನ್ಮದಲ್ಲಿ ಅವನು ಬೆಕ್ಕಾಗಿದ್ದುದರಿಂದ ಎಲೆಯಲ್ಲಿ ಹೆಗ್ಗಣವಿರದಿದ್ದರೆ ತಪ್ಪೆನ್ನುವನು ಎಂದು ಪುನರ್ಜನ್ಮ ಸ್ವಾಮಿಗಳು ಹೇಳಿದ್ದಾರೆ.

■ ರಾಮ್